**ದಿನಾಂಕ: 27–02–2019 ರಂದು ವಾರ್ಡ್ ಸಂಖ್ಯೆ 197 ವಸಂತಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

***ಹಾಜರಿದ್ದ ಸಮಿತಿ ಸದಸ್ಯರು:–***

1. ಶ್ರೀಮತಿ ಶೋಭಾ ಗೌಡ– ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನಗರ ಪಾಲಿಕೆ ಸದಸ್ಯರು (ವಾರ್ಡ್ 197 ವಸಂತಪುರ)
2. ಶ್ರೀ ಜಗದೀಶ್.ಜೆ–ಸದಸ್ಯರು
3. ಶ್ರೀ ನಾಗಪ್ಪ –ಸದಸ್ಯರು
4. ಶ್ರೀಮತಿ ಕಲಾವತಿ–ಸದಸ್ಯರು
5. ಶ್ರೀಮತಿ ಆರ್.ಶಾರದ –ಸದಸ್ಯರು
6. ಶ್ರೀಮತಿ ಅನುಸಿಂಗ್–ಸದಸ್ಯರು
7. ಶ್ರೀ ಗೋವಿಂದರಾಜು–ಸದಸ್ಯರು
8. ಶ್ರೀ ನಂದಕುಮಾರ್–ಸದಸ್ಯರು

***ಹಾಜರಿದ್ದ ಅಧಿಕಾರಿಗಳು:–***

1. ಶ್ರೀ ನರೇಂದ್ರ ಕುಮಾರ್.ಎ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 197 ವಸಂತಪುರ)
2. ಶ್ರೀ. ಸುದರ್ಶನ್ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
3. ಶ್ರೀ.ವಿಜಯ್ ಕುಮಾರ್ – ಕೆ.ಪ (ವಸಂತಪುರ)
4. ಶ್ರೀ ಮಹೇಶ್ – ಹಿ.ಆ.ಪ (ವಸಂತಪುರ)

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 197 ರ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಶೋಭಾಗೌಡ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. ವಿಠ್ಠಲನಗರ ಅಡ್ಡರಸ್ತೆಯ ಚರಂಡಿಯಲ್ಲಿನ ಹೂಳನ್ನು ತೆಗೆಯುವ ಬಗ್ಗೆ ಸಮಿತಿ ಸದಸ್ಯರು ಕೋರಿರುತ್ತಾರೆ. ಈ ಮೇರೆಗೆ ಸದರಿ ರಸ್ತೆ ಬದಿಯ ಚರಂಡಿಯಲ್ಲಿನ ಹೂಳನ್ನು ತೆಗೆಯಲಾಗುವುದು ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರು ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ತೊಂದರೆ ಹೆಚ್ಚಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಮಾನ್ಯ ಪಾಲಿಕೆ ಸದಸ್ಯರು ಕೂಡಲೇ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

Scanned by CamScanner

3. ದೊಡ್ಡಕಲ್ಲಸಂದ್ರದಲ್ಲಿ ಅನಿಮಿಯತವಾಗಿ ಕುಡಿಯುವ ನೀರು ಸರಬರಾಜು ಆಗುತ್ತಿರುವುದಾಗಿ ಸಮಿತಿ ಸದಸ್ಯರು ತಿಳಿಸಿರುತ್ತಾರೆ. ಈ ಮೇರೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ.
4. ವಿಠ್ಠಲನಗರ ವ್ಯಾಪ್ತಿಯ ಹಲವು ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಒಳಚರಂಡಿ ಪೈಪುಗಳನ್ನು ಅಳವಡಿಸಲು ರಸ್ತೆ ಅಗೆತ ಮಾಡಿ ರಸ್ತೆಗಳನ್ನು ಹಾಳು ಮಾಡಿರುತ್ತಾರೆ. ಈ ಮೇರೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ.
5. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳು ಹಾಳಾಗಿ ದುರಸ್ಥಿಯಲ್ಲಿರುತ್ತದೆ ಎಂದು ಸಮಿತಿ ಸದಸ್ಯರು ತಿಳಿಸಿರುತ್ತಾರೆ. ಅದಕ್ಕೆ ಮಾನ್ಯ ಪಾಲಿಕೆ ಸದಸ್ಯರು ಬೆಸ್ಕಾಂ ಇಲಾಖೆಗೆ ಕೂಡಲೇ ಈ ಬಗ್ಗೆ ಹಾಳಾಗಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಶೋಭಾಗೌಡ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀಮತಿ ಶೋಭಾಗೌಡ
ಅಧ್ಯಕ್ಷರು ಹಾಗೂ ವಾರ್ಡ್ ಪಾಲಿಕೆ ಸದಸ್ಯರು
ವಾರ್ಡ್ ಸಂಖ್ಯೆ 197 ವಸಂತಪುರ

ಶ್ರೀ ನರೇಂದ್ರ ಕುಮಾರ್.ಎ
ಸಂಚಾಲಕರು ಹಾಗೂ ಸ.ಅ–197

ಪ್ರತಿಯನ್ನು:–

1. ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಬೆಂಗಳೂರು–ದಕ್ಷಿಣ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

Scanned by CamScanner